ಕಥೆ

ಎಲ್ರ ಹೆಗ್ಲಿಗೂ ಮತ್ತು ಸೊಂಟಕ್ಕೆ ಸುತ್ತಿಕೊಳ್ಳಲು ಅಡ್ಡೆ ಕಂಟ್ರಾಕ್ಟುದಾರ ಕೊಡ್ತಿದ್ದ. ಅದ್ನುಟ್ಕಂಡು ಸೇಮ್ ಸರುಣ್ರು ರೀತಿನೇ ಹಾಸ್ಟೆಲ್ ಹುಡುಗ್ರು ಹಣೆಗೆ ಈಬತ್ತಿ ಧರುಸ್ಕಂಡು ರೆಡಿಯಾಗ್ತಿದ್ರು. ಮದ್ವೆ ಮನೇಲಿ ತರ್ಕಾರಿ ಹಚ್ಕೊಡೋದು, ಸಾರನ್ನು ತಿರ್ಗ್ಸೋದು, ಅನ್ನ ಬಸಿಯೋದು, ಕುರ್ಚಿ ತಗಂಡು ಅದು ಇದು ಮಾಡೋದು, ಆಮೇಲೆ ಸಡುಗ್ರದಿಂದ ಊಟ ಬಡ್ಸೋದು ಅವ್ರಿಗೆಲ್ಲ ಕುಷಿ ಕೊಡ್ತಿತ್ತು. ಎರಡು ದಿನ ರುಚಿರುಚಿ ತಿನ್ನುವಷ್ಟು ಊಟ, ಬಾದಶಹ, ಲಡ್ಡು, ಮೈಸೂರು ಪಾಕ್, ಬೂಂದಿ ಎಲ್ಲ ಒದುಗ್ಬತ್ತಿದ್ವು. ಮದ್ವೆ ಮುಗ್ಸಿ ಹಾಸ್ಟೆಲ್ಗೆ ವಾಪಸ್ಸು ಬಂದಮೇಲೆ ಅವುನ್ನೆಲ್ಲ ವಾರ್ಗಟ್ಲೆ ಟ್ರಂಕಗಿಟ್ಕಂಡು ತಿನ್ನೋರು. ಆಮೇಲೆ ಬರೋವಾರ ಮತ್ತೆ ಮದ್ವೆಮನೆಗೆ ತಯಾರಾಗ್ತಿದ್ರು. ತಿಂದುಂಡಟ್ಕಂಡು ಪೊಗದಸ್ತಾಗಿ ಕಾಣ್ತಿದ್ರು. ಆ ಗುಂಪಿಗೆ ಕದ್ರನು ಸೇರ್ಕಂಡ. ಸರಣ್ರಂತೆ ನಯನಾಜೂಕು ಕಲ್ತಂಡು ತಿಂದುಂಡ್ಕಂಡು ದುಡಿದ ಹಣವನ್ನು ಸಂಗ್ರಹಿಸಿ ಇಡ್ತಿದ್ದ. ಸಣಕಲಾಗಿದ್ದ ಕದ್ರ ಮದ್ವೆಮನೆ ಊಟ ಬಿದ್ಮೇಲೆ ಮತ್ತಷ್ಟು ರಂಗಾಗಿ ಕಂಗೊಳಿಸುತ್ತಿದ್ದ. ಅಂದುಕೊಂಡಷ್ಟು ದುಡ್ಡು ಸಿಕ್ದಾಗ ಮೊದ್ಲೇ ಅಂದ್ಕಂಡಾಗೆ ತನ್ನ ಜಾತಿಯನ್ನು ಸೂಚಿಸುವ ಹೆಸರನ್ನು ಬದಲಾಯಿಸಲು ತೀರ್ಮಾನಿಸಿ ಸೀನಿಯರ್‌ನ ಭೇಟಿಯಾದ. ಆ ಸೀನಿಯರ್ ಅಲ್ಲಿಇಲ್ಲಿ ಹುಡುಕಿ ನೋಟರಿ ಲಾಯರ್‌ನ ಹಿಡ್ಕಂಡು ಕದ್ರನನ್ನು 'ಕಾಂತ'ನಾಗಿ ಬದಲಾಯಿಸಿದ. ಕಾಂತ ಅಂತ ಹೆಸರಿಟ್ಟುಕೊಂಡ ಮೇಲೆ ಹೆಸರನ್ನು ಹೆಮ್ಮೆಯಿಂದ ಹೇಳ್ಕಂತಿದ್ದ. ಕಾಂತನಿಗೆ ಕದ್ರನೇ ಅಪರಿಚಿತನಾಗತೊಡಗಿದ. ಅದುಕ್ಕೆ ತಕ್ಕನಾಗಿ ಧರ್ಮಸ್ಥಳುಕ್ಕೋ, ಹೊರನಾಡ್ಗೋ ಇನ್ನೆಲ್ಲಿಗೋ ಹೋದಾಗ ಅಂಗಡೀಲಿ ಸಿಗುವ ರುದ್ರಾಕ್ಷಿ ಮಾಲೆನ ಕೊರಳಿಗೆ, ಕೈಗೆ ಕಟ್ಕಂಡು ತಿರುಗ್ತಿದ್ದ. ಯಾರೂ ಅವ್ನ ಮೇಲೆ ಅನ್ಮಾನ ಪಡ್ತಿರ್ಲಿಲ್ಲ. ಅವ್ನು ಉತ್ತುಮ್ರ ಜಾತಿನೇ ಇರ್ಬೇಕೆಂದು ಅನೇಕ ಗೆಳೆಯರು ಹತ್ತಿರಾದ್ರು.

ಓದಿದ. ಓದು ಮುಗೀತು. ಕೆಲ್ಸ ಹುಡಿಕೊಂಡು ಅಲೆದಾಡಿದ. ಹಿಂದೆ ಹೇಳುತ್ತಿದ್ದ ಮಾತುಗಳು ಮತ್ತೆ ರಿಪೀಟ್ ಆಗೋಕೆ ಶುರುವಾದ್ವು. ಓದುವಾಗ ಓದಿಸುವ ಕೆಲಮೇಷ್ಟ್ರುಗಳು, ಕೆಲಸ ಹುಡುಕುವಾಗ ಉತ್ತುಮ್ರು ಅನಿಸಿಕೊಂಡವರೆಲ್ಲಾ 'ನಿಮಗ್ಯೇನು ಬಿಡು, ಎಲ್ಲ ಸಿಕ್ತದೆ', 'ಓ ನೀವು ಅವಾ? ನಿಮ್ಗೆಲ್ಲಾ ಉಚಿತ ಬಿಡು', 'ಫೀಸು ಕಟ್ಟಂಗಿಲ್ಲ...' ಇವುನ್ನೆಲ್ಲ ಕೇಳಿ ಕೇಳಿ ಸುರುಟಿಹೋಗಿದ್ದ ಕದ್ರ. ತನ್ನಜ್ಜ, ತನ್ನಪ್ಪ ಮಾಡುತ್ತಿದ್ದ ಕುಲ್ವಾಡ್ಕೆನೇ ಮಾಡುವಂತೆ ಸುತ್ತುಮುತ್ತಲಿನ ವಾತಾವರಣವೇ ಒತ್ತಾಯಿಸುತ್ತಿತ್ತು. ಕೆಲ್ಸ ತಗೊಳ್ಳೇಬೇಕೆಂದು ಎಸ್‌ಡಿಎ, ಎಫ್‌ಡಿಎ ಎಕ್ಸಾಂ ತಗೋಡು ಪಟ್ಟಿಡಿದು ಓದಿದ. ಅಂಗೂ ಇಂಗೂ ದೇಕ್ತ ಒಂದು ನೌಕ್ರಿ ಗಿಟ್ಟಿಸಿಕೊಂಡ. ಅದೂ ಮೂಡ್ಲಾಪುರ ತಾಲ್ಲೂಕು ಆಫೀಸ್‌ನಲ್ಲಿ ಗುಮಾಸ್ತನ ಕೆಲ್ಸ. ಸದಾ ಗಜಿಬಿಜಿ ಜನ. ಹಳ್ಳೇರು, ಹೆಂಗುಸ್ರು, ಗಂಡುಸ್ರು ತುಂಬಿರ್ತಿದ್ರು. ಬಂದವ್ರಿಗೆ ತನ್ನ ಪಾಡ್ಗೆ ತಾನು ಕೆಲ್ಸ ಮಾಡಿಸ್ಕೊಟ್ಟು ವರ್ಖುನ್ ಕಡ್ಮೆ ಮಾಡ್ಕಂತಿದ್ದ ಕಾಂತ. ಅವ್ನ ಕೆಲ್ಸದ ಪರಿ ನೋಡಿ ಫೈಲೆಲ್ಲಾ ಅವ್ನ ಟೇಬಲ್ ಮುಂದೆ ರಾಶಿರಾಶಿಯಾಗಿ ಬಂದು ಬಂದು ಬೀಳ್ತಿದ್ವು. ಅವುಗಳನ್ನೆಲ್ಲ ಡಿಸ್‌ಪೋಸ್ ಮಾಡವಷ್ಟತ್ಗೆ ನಡು ಮುರ್ದೋದಂಗೆ ಆಗ್ಬಿಡೋದು. ಹಳ್ಳಿಜನ್ರ ಪಹಣಿ, ಪೋಡಿ, ಸರ್ವೆನಂಬರ್, ಎಂ.ಆರ್. ಇವೆಲ್ಲಾ ಅವ್ನಿಗೆ ಬಾಯ್ಪಾಟವಾಗಿ ಕನ್ಸುಮನ್ಸಲ್ಲೂ ಅವ್ಗಳೇ ತೇಲಾಡ್ತಿದ್ವು. ಮಲ್ಗಿದ್ದಾಗ ಎಷ್ಟೊತ್ನಾಗ ಕೇಳಿರು ಯಾವ್ ಸರ್ವೇ ನಂಬರ್ ಫೈಲ್ ಎಲ್ಲೈತೆ ಅನ್ನೋದ್ನ ಹೇಳ್ಬಿಡೋನು. ಅಷ್ಟು ಪಳುಗ್ಬಿಟ್ಟಿದ್ದ. ಹತ್ತದಿನೈದು ವರ್ಷ ಸರ್ವೀಸ್ ಮುಗ್ಸಿ ಆರ್‌ಐ ಆಗಿ ಬಡ್ತಿ ಪಡೆದು ನಿವೃತ್ತಿಯ ದಿನಗಳಿಗೆ ಕಾಯುತ್ತಿದ್ದ. ಇದ್ದಕ್ಕಿದ್ದಂಗೆ ಮೂಡ್ಲಾಪುರ ಆಫೀಸ್‌ನಲ್ಲಿ ತನ್ನ ಹಳೆಗೆಳೆಯ ಮುಷ್ಣಿ ಪ್ರತ್ಯಕ್ಷ ಆದ. ಅದು ತಾಲ್ಲೂಕು ಆಫೀಸ್‌ನಲ್ಲಿ ಕಾಂತನ ಕಚೇರಿಯಲ್ಲಿಯೇ ಕೆಲಸ. ಕಾಂತನಿಗೆ ಅವನನ್ನು ನೋಡಿ ಆಶ್ಚರ್ಯ. ಕುಸಿಯಾಯಿತು. ಹೋಗಿ ಮಾತನಾಡಲು ನೋಡಿದ. ಆ ಮೂರ್ತಿ ಸಿಡಿಮಿಡಿ ಅಂತಿದ್ದ. ಕಾಂತನನ್ನು ನೋಡಿದ್ದೆ ಹೌಹಾರಿ ದೂರನಿಂತ. ಕಣ್ಮುಚ್ಚಿಕೊಂಡ ಶಿವಧ್ಯಾನ ಮಾಡಿದ. ಕಾಂತನ ಕಣ್ತಪ್ಪಿಸಿ ಓಡಾಡಲು ರೂಢಿಸಿಕೊಂಡ. ತನಗೆ ಆ ಕದ್ರ ಗೊತ್ತೇ ಇಲ್ವೇನೋ ಎಂಬಂತೆ ದೂರದಿಂದಲೇ ವ್ಯವಹರಿಸುತ್ತಿದ್ದ. ಇವರಿಬ್ಬರಿಗೂ ಮಧ್ಯಸ್ಥಗಾರನಾಗಿ ಪ್ಯೂನ್ ಕರಿಯಪ್ಪ ಇದ್ದ. ಇದ್ರಿಂದ ಬೇಸತ್ತ ಕಾಂತ ಯಥಾಸ್ಥಿತಿಗೆ ಬಂದ. ಆ ಮುಷ್ಣಿಯಿಂದ ಏನ್ ಬಿಡತ್ತ? ಅಂತ. ಆದರೆ ಮುಷ್ಣಿಮೂರ್ತಿ ಕದ್ರನ ವಿವರ ಎಲ್ಲ ಕರಿಯಪ್ಪನಿಂದ ತಿಳಿದುಕೊಂಡ. 'ಓಹೋ, ಹೆಸ್ರು ಬದ್ಲಾಯಿಸ್ಕಂಡವ್ನ.